O.S.No.419/2017
PW -2

ದಿನಾಂಕ 21/11/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು:- ಶ್ರೀ ಪಿ.ಸಿ.ಕೆ.ಆರ್. 6 ನೇ ಪ್ರತಿವಾದಿ ಪರ ವಕೀಲರಿಂದ**

ನನ್ನ ತಾತ 1970 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಾತನ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ನನ್ನ ತಂದೆ ಈಗ ತೀರಿಕೊಂಡಿರುತ್ತಾರೆ. ನನ್ನ ತಂದೆಯ ಮರಣ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ನನ್ನ ತಾತನ ಆಸ್ತಿಗಳನ್ನು ವಿಭಾಗ ಮಾಡಿಕೊಂಡು ಅವರವರ ಭಾಗಕ್ಕೆ ಬಂದ ಆಸ್ತಿಗಳನ್ನು ಖಾತೆ ಪಹಣಿ ಮಾಡಿಕೊಂಡು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ನನ್ನ ತಾತ ಇದ್ದ ಕಾಲಕ್ಕೆ ಆಸ್ತಿಗಳನ್ನು ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ದೊಡ್ಡಪ್ಪ ಮನೆ ಯಜಮಾನಿಕೆ ಮಾಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ನಮ್ಮ ಭಾಗಕ್ಕೆ ಸರ್ವೆ ನಂ- 44/4 ರಲ್ಲಿ 4 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂ- 44/6 ರಲ್ಲಿ 4 ಭಾಗ ಆಗಿ ಅದರಲ್ಲಿ 19 ಗುಂಟೆ ಖುಷ್ಕಿ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ- 67/3 ರಲ್ಲಿ 21 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸಾಕ್ಷಿ 37/1 ರಲ್ಲಿ ಬಂದಿರುತ್ತದೆ ಎಂದು ಉತ್ತರಿಸಿರುತ್ತಾರೆ. ಸರ್ವೆ ನಂ- 61/1 ರಲ್ಲಿ 1 ಎಕರೆ 21 ಗುಂಟೆ ಬಂದಿರುತ್ತದೆ ಎಂದರೆ ಸರಿ. ಬಿಜವಾರದ ನಿವೇಶನ ಅಸೆಸ್ ಮೆಂಟ್ ನಂ-103 ರಲ್ಲಿ ಒಂದು ಮನೆ ನಮ್ಮ ಭಾಗಕ್ಕೆ ಬಂದಿರುತ್ತದೆ ಎಂದರೆ ಸಾಕ್ಷಿ ನಾವು ಕೊಂಡುಕೊಂಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ.

2. ನಾನು ದಾವಾ ಆಸ್ತಿಗಳ ಖಾತೆ ಪಹಣಿ ನೋಡಿರುತ್ತೇನೆ. ನಮ್ಮ ತಂದೆ ಮತ್ತು ಅವರ ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡ ಪತ್ರವನ್ನು ನಾನು ನೋಡಿರುವುದಿಲ್ಲ. ಸದರಿ ವಿಭಾಗ ಪತ್ರದ ಪ್ರತಿ ನಮ್ಮ ಬಳಿ ಇರುತ್ತದೆ ಎಂದರೆ ಸರಿ ಸದರಿ ವಿಭಾಗ ಪತ್ರವನ್ನು ನಾನು ನೋಡಿರುತ್ತೇನೆ ಸದರಿ ವಿಭಾಗ ಪತ್ರದಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಚರ ಆಸ್ತಿ ಮುತ್ತ ಸ್ಥಿರ ಆಸ್ತಿಗಳು ಇರುವುದಿಲ್ಲ ಎಂದು

ನಮೂದು ಮಾಡಿರುತ್ತದೆ ಎಂದರೆ ಸರಿ. 1984 ನೇ ಸಾಲಿನಲ್ಲಿ ದಾವಾ ಆಸ್ತಿ ಸಂಬಂಧ ವಿಭಾಗ ಆಗಿರುತ್ತದೆ ಎಂದರೆ ಸರಿ. ಸದರಿ ವಿಭಾಗದಂತೆ ಅವರವರ ಹಿಸ್ಸೆಗೆ ಬಂದ ಆಸ್ತಿಗಳ ಖಾತೆ ಪಹಣಿ ಆಗಿರುತ್ತದೆ ಎಂದರೆ ಸರಿ. ಎಲ್ಲರ ಸ್ವರಸ್ವರ ಒಪ್ಪಿಗೆ ಮೇರೆಗೆ ವಿಭಾಗ ಪತ್ರ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಈ ದಾವೆಯಲ್ಲಿ ಸರ್ವೆ ನಂ- 61/1 ರಲ್ಲಿ 1 ಎಕರೆ 6 ಗುಂಟೆಗೆ ಭಾಗಕ್ಕೆ ಹಾಕಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ಉಳಿಕೆ ಜಮೀನುಗಳ ಬಗ್ಗೆ ಮುಂದೆ ಭಾಗ ಮಾಡಿಕೊಳ್ಳುವ ಬಗ್ಗೆ ಬರೆದಿರುತ್ತಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

3. ಭಾಗ ಆಗುವ ಕಾಲಕ್ಕೆ ನಾನು ಚಿಕ್ಕವನು ಇದ್ದೆ ಎಂದರೆ ಸರಿ. ನಾವು ವಯಸ್ಸಿಗೆ ಬಂದ ನಂತರ ನಾವು ಭಾಗ ಕೋರಿ ದಾವೆ ಹೂಡಿರುವುದಿಲ್ಲ ಎಂದರೆ ಸರಿ. ನಮ್ಮ ತಂದೆ ಮತ್ತು ಅವರ ಅಣ್ಣ ತಮ್ಮಂದಿರು ಬದುಕಿದ್ದ ಕಾಲಕ್ಕೆ ಭಾಗ ಮಾಡಿಕೊಳ್ಳು ಬಗ್ಗೆ ಮಾತನಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಬಗ್ಗೆ ಬೇರೆಯವರಿಂದ ಯಾವುದೇ ತಕರಾರು ಇರಲಿಲ್ಲ ಎಂದರೆ ಸರಿ. ದಾವಾ ಸರ್ವೆ ನಂಬರ್ ಬಗ್ಗೆ ಯಾವುದೇ ತಕರಾರು ಇರಲಿಲ್ಲ ಎಂದರೆ ಸರಿ. ದಾವಾ ಸರ್ವೆ ನಂಬರ್ ಬಗ್ಗೆ ಕರಿಯಪ್ಪ ಮತ್ತು ಇತರರಿಂದ ಯಾವುದೇ ತಕರಾರು ಬಂದಿರಲಿಲ್ಲ ಎಂದರೆ ಸರಿ. 6 ನೇ ಪ್ರತಿವಾದಿ ಕರ್ತನಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಇದ್ದ ಕಾಲಕ್ಕೆ ದಾವಾ ಆಸ್ತಿ ವಿಭಾಗ ಮಾಡಿರುವ ಬಗ್ಗೆ ಸರಿ ಇಲ್ಲ ಎಂದು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರ ಜೀವಿತಾವಧಿಯಲ್ಲಿ ಯಾವುದೇ ತಕರಾರು ಇರಲಿಲ್ಲ ಎಂದರೆ ಸರಿ. 6 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಸ್ವಯಾರ್ಜಿತವಾಗಿ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಮೌಖಿಕವಾಗಿ ಖರೀದಿ ಮಾಡಿದ್ದರು ಎಂದು ಉತ್ತರಿಸಿರುತ್ತಾರೆ. ರೇವಣ್ಣ ಇವರು 6 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

4. ಗೋಪಾಲಪ್ಪ ತೀರಿಕೊಂಡ ನಂತರ 6 ನೇ ಪ್ರತಿವಾದಿ ದಾವಾ ಆಸ್ತಿಯ ಖಾತೆ ಪಹಣಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಭಾಗ ಕೊಡುವಂತೆ ನಾವು ಕೇಳಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ದಾವೆ ಹೂಡುವ ಒಂದು ತಿಂಗಳ ಮುಂಚೆ ಭಾಗ ಕೇಳಿರುತ್ತೇವೆ. 6 ನೇ ಪ್ರತಿವಾದಿ ಹೆಸರಿಗೆ ಖಾತೆ ಪಹಣಿ ಆಗುವ ಕಾಲಕ್ಕೆ ನಾನು ತಕರಾರು ಮಾಡಿಲ್ಲ ಎಂದರೆ ಸರಿ. 2017 ನೇ ಸಾಲಿಗಿಂತ ಮುಂಚೆ ದಾವಾ ಆಸ್ತಿಯ ಬಗ್ಗೆ ನಾನು ಕೇಳಿರುವುದಿಲ್ಲ ಎಂದರೆ ಸರಿ. 6 ನೇ ಪ್ರತಿವಾದಿ ಖಾತೆ ಪಹಣಿ ಮಾಡಿಸಿಕೊಂಡಿರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿ. ದಾವಾ ಆಸ್ತಿ ನನ್ನ ತಾತನ ಕುಟುಂಬಕ್ಕೆ ಸಂಬಂಧಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. 2 ರಿಂದ 4 ನೇ ಪ್ರತಿವಾದಿಗಳು ವಿಭಾಗ ಮಾಡಿಕೊಂಡು ಪ್ರತ್ಯೇಕ ಸ್ವಾಧೀನ ಅನುಭವದಲ್ಲಿ ಇದ್ದರು ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು , ಕಾಲವಕಾಶ ನೀಡಲಾಯಿತು**

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ